MVC NO. 136/2023 -4- PW-1 – ನಿರ್ಮಲಾ ವೆಂಕಟಾಪೂರ ಸಾಕ್ಷಿಯನ್ನು ದಿನಾಂಕಃ 27/02/2025 ರಂದು ಕರೆಯಿಸಿ ಸತ್ಯ ಪ್ರತಿಜ್ಞೆಯ ಮೇಲೆ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ- 1 ನೇ ಎದುರುದಾರ ಪರ ವಕೀಲರಿಂದಃ**

ನನ್ನ ಪ್ರಮಾಣ ಪತ್ರ ಬರೆಯಲು ಮಾಹಿತಿಯನ್ನು ನಾನೇ ನೀಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಸ್ವಲ್ಪ ಸ್ವಲ್ಪ ಬರುತ್ತದೆ. ಪ್ರಮಾಣ ಪತ್ರದಲ್ಲಿರುವ ವಿಚಾರ ನನಗೆ ಗೊತ್ತು. ನನ್ನ ಗಂಡನ ಆಧಾರ ಕಾರ್ಡ ಇದೆ. ಅದನ್ನು ಹಾಜರು ಪಡಿಸಲು ನನಗೆ ತೊಂದರೆ ಇಲ್ಲ. ನನ್ನ ಗಂಡ 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದರು. ನನ್ನ ಗಂಡನಿಗೆ ಸಾಯುವ ಸಮಯದಲ್ಲಿ 55 ವರ್ಷ ವಯಸ್ಸಾಗಿತ್ತು ಎಂದು ತೋರಿಸಲು ದಾಖಲೆ ಹಾಜರು ಮಾಡಿದ್ದೇನೆ. ನೀವು ಯಾವುದೇ ದಾಖಲಾತಿಯನ್ನು ಹಾಜರು ಮಾಡಿಲ್ಲ, ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನನಗೆ ಒಬ್ಬಳೆ ಹೆಣ್ಣು ಮಗಳು. ಮಗಳ ಮದುವೆಯಾಗಿದೆ. ಅವಳು ತನ್ನ ಗಂಡನ ಮನೆಯಲ್ಲಿ ವಾಸವಾಗಿದ್ದಾಳೆ. 2 ನೇ ಅರ್ಜಿದಾರಳು ದುಡಿಯುವುದಿಲ್ಲ. ನಾನು ಕೂಲಿಕೆಲಸಕ್ಕೆ ಹೋಗುತ್ತೇನೆ. ಶೇಖಪ್ಪ ಜೀವಂತ ಇದ್ದಾಗ ಅವರು ದುಡಿಯುತ್ತಿದ್ದರು, ನೀವು ದುಡಿಯುತ್ತಿದ್ದೀರಿ, ಆದ್ದರಿಂದ ಕೇವಲ ಶೇಖಪ್ಪನ ದುಡಿಮೆಯ ಮೇಲೆ ನೀವು ಅವಲಂಬಿತರಾಗಿರಲಿಲ್ಲ ಎಂದರೆ ಸರಿಯಲ್ಲ.

ನಿಮ್ಮ ಗಂಡ ಪ್ರತಿ ತಿಂಗಳು ರೂ.20,000/- ದುಡಿಯುತ್ತಿದ್ದರು ಎಂದು ತೋರಿಸಲು ದಾಖಲೆ ಹಾಜರು ಮಾಡಿಲ್ಲ, ಆದರೆ ದುಡಿಯುತ್ತಿದ್ದರು ಎಂದು ಹೇಳುತ್ತಾರೆ. ನನ್ನ ಗಂಡನ ಹೆಸರಿನಲ್ಲಿ ಜಮೀನು ಇದೆ. ಅದರ ಉತಾರ ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ಸದರಿ ಪರಿಹಾರ ವಿಮೆ ಕಂಪನಿಯವರು ಕೊಡಲು ಭಾದ್ಯರಾಗಿದ್ದಾರೆ ಎಂದರೆ ಇಬ್ಬರು ಭಾದ್ಯರಾಗಿದ್ದಾರೆ ಎಂದು ಹೇಳುತ್ತಾರೆ. ವಿಮೆ ಇರುವುದರಿಂದ ವಾಹನದ ಮಾಲೀಕರು ಪರಿಹಾರ ಕೊಡಲು ಭಾದ್ಯರಲ್ಲ ಎಂದರೆ ಸರಿಯಲ್ಲ.

**ಮುಂದಿನ ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.**

**2 ನೇ ಎದುರುದಾರ ಪರ ವಕೀಲರು ಪಾಟೀ ಸವಾಲಿಗೆ ಕಾಲವಕಾಶ ಕೇಳಿದ್ದು, ಆಲಿಸಿ ಪ್ರಕರಣವನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

(ಶ್ರೀಮತಿ ಪಿ. ಆರ್ ಪಾಟೀಲ)
27.02.2025
**ಅಧಿಕ ಹಿರಿಯ ದಿವಾಣಿ ನ್ಯಾಯಾಧೀಶರು, ಗದಗ**